# ‘ಜನನಾಯಗನ್’ಗೆ ಕೂಡಿಬಾರದ ಕಾಲ

ರಾಜಕಾರಣದಲ್ಲಿ ಒಂದು ಕಾಲನ್ನು ದೊಡ್ಡದಾಗಿಯೇ ಇಟ್ಟಿರುವ ನಟ ವಿಜಯ್ ಅವರ ಕೊನೆಯ ಸಿನಿಮಾ ‘ಜನನಾಯಗನ್’ಗೆ ಕೊನೆಗೂ ಬಿಡುಗಡೆ ಭಾಗ್ಯ ಸಿಗಲಿಲ್ಲ.

ಜನವರಿ 9ರಂದು ಸಿನಿಮಾ ಬಿಡುಗಡೆ ಮಾಡಲು ತಂಡ ಮುಂದಾಗಿತ್ತು. ಆಮೇಲೆ ಫೆಬ್ರುವರಿಗೆ ಮುಂದೂಡಿಕೆಯಾಯಿತು. ಮುಂಗಡ ಟಿಕೆಟ್ ಕಾಯ್ದಿರಿಸುವಿಕೆಯ ಅವಕಾಶವನ್ನು ಬುಕ್‌ಮೈಶೋ ವೇದಿಕೆ ಮೂಲಕ ಒದಗಿಸಲಾಗಿತ್ತು. ಆದರೆ, ಪ್ರಕರಣವು ಕೋರ್ಟ್‌ನ ಕಟಕಟೆ ಏರಿದ್ದರಿಂದ ಬಿಡುಗಡೆಗೆ ಹಸಿರು ನಿಶಾನೆ ಸಿಗಲಿಲ್ಲ.

ಸೆನ್ಸಾರ್ ಮಂಡಳಿಯ ಎದುರು ಪರಿಶೀಲನೆಗಾಗಿ ಸಿನಿಮಾ ಇದೆಯಾದರೂ, ಅದರಲ್ಲಿನ ಕೆಲವು ರಾಜಕೀಯ ಸಂಗತಿಗಳ ಉಲ್ಲೇಖವು ಅದನ್ನೀಗ ಪೇಚಿಗೆ ಸಿಲುಕಿಸಿದೆ. ಪ್ರಮಾಣಪತ್ರ ನೀಡುವ ಮೊದಲು ಎರಡು ಬಾರಿ ಎಚ್ಚರ ವಹಿಸುವುದು ಅದರ ನಿರ್ಣಯ. ಹೀಗಾಗಿ ಚುನಾವಣಾ ಆಯೋಗದ ಗಮನಕ್ಕೆ ಸಿನಿಮಾ ಸಂಗತಿಯನ್ನು ತರಲಾಗಿದೆ ಎಂದು ವದಂತಿ ಹರಡಿದೆ. ಆದರೆ, ಚುನಾವಣಾ ಆಯೋಗದವರು ತಮಗೆ ಸೆನ್ಸಾರ್ ಬೋರ್ಡ್‌ನಿಂದ ಯಾವುದೇ ಸಂವಹನ ಬಂದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ತಮಿಳುನಾಡಿನಲ್ಲಿ ಏಪ್ರಿಲ್ 23ರಂದು ವಿಧಾನಸಭಾ ಚುನಾವಣೆ ನಡೆಯಲಿದೆ. ಅದಾಗಲೇ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದೆ. ನಟ ವಿಜಯ್ ಟಿವಿಕೆ ಪಕ್ಷದ ಮೂಲಕ ರಾಜಕೀಯ ಅಖಾಡಕ್ಕೆ ಇಳಿದಿದ್ದಾರೆ. ಅವರಿಗೆ ಮುಖ್ಯಮಂತ್ರಿ ಸ್ಥಾನ ಹಾಗೂ 20 ಸೀಟುಗಳನ್ನು ನೀಡುವುದಾಗಿ ದೊಡ್ಡ ಪಕ್ಷವೊಂದು ಈ ಹಿಂದೆ ಮಾತುಕತೆಗೆ ಮುಂದಾಗಿತ್ತು ಎಂದು ಟಿವಿಕೆ ಪಕ್ಷದ ಪ್ರಧಾನ ಕಾರ್ಯದರ್ಶಿ ಆಧವ್ ಅರ್ಜುನ ಇತ್ತೀಚೆಗೆ ಹೇಳಿದರು.

ಸಿನಿಮಾ ಕುರಿತು ದೀರ್ಘಾವಧಿ ಏನನ್ನೂ ಮಾತನಾಡದೆ ಇದ್ದ ವಿಜಯ್ ಇತ್ತೀಚೆಗೆ, ‘ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ತಮ್ಮ ಸಿನಿಮಾಗೆ ಸೆನ್ಸಾರ್ ಪ್ರಮಾಣಪತ್ರ ಸಿಗದಂತೆ ಏನೆಲ್ಲ ಮಾಡಬೇಕೋ ಎಲ್ಲವನ್ನೂ ಮಾಡುತ್ತಿದೆ’ ಎಂದು ಪ್ರತಿಕ್ರಿಯೆ ನೀಡಿದ್ದರು.

ಕೆವಿಎನ್ ನಿರ್ಮಾಣ ಸಂಸ್ಥೆ ಬಂಡವಾಳ ಹೂಡಿರುವ ಚಿತ್ರದಲ್ಲಿ ನಟಿ ಪೂಜಾ ಹೆಗಡೆ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ವಿಜಯ್ ರಾಜಕೀಯ ಪ್ರವೇಶಕ್ಕೆ ಮೊದಲು ಸಿನಿಮಾ ಬಿಡುಗಡೆಯಾದರೆ ಪ್ರಚಾರಕ್ಕೆ ಅನುಕೂಲವಾಗುತ್ತದೆ ಎಂಬ ಲೆಕ್ಕಾಚಾರವಿತ್ತು. ಆ ಅನುಕೂಲವನ್ನು ವ್ಯವಸ್ಥೆಯು ಎರಡು ತಿಂಗಳಿನಿಂದಲೂ ವಿಜಯ್ ಅವರಿಂದ ದೂರ ಮಾಡುತ್ತಲೇ ಬಂದಿದೆ. ಇನ್ನು ಚುನಾವಣೆ ಮುಗಿಯುವವರೆಗೆ ಚಿತ್ರ ತೆರೆಕಾಣುವುದು ಅನುಮಾನ ಎಂದೇ ವಿಶ್ಲೇಷಿಸಲಾಗುತ್ತಿದೆ.

ಕೆವಿಎನ್ ನಿರ್ಮಾಣ ಸಂಸ್ಥೆಯ ‘ಟಾಕ್ಸಿಕ್’ ಚಿತ್ರದ ಬಿಡುಗಡೆಯು ಯುದ್ಧದ ಕಾರಣಕ್ಕೆ ಜೂನ್‌ವರೆಗೆ ಮುಂದೂಡಿಕೆಯಾಯಿತು. ‘ಕೆ.ಡಿ—ದಿ ಡೆವಿಲ್’ ಅಶ್ಲೀಲ ಹಾಡಿನಿಂದಾಗಿ ವಿವಾದಕ್ಕೀಡಾಯಿತು. ಇದೀಗ ‘ಜನನಾಯಗನ್’ಗೂ ಬಿಡುಗಡೆಯ ಭಾಗ್ಯವಿಲ್ಲ. ಸಿನಿಮಾ ಅದೃಷ್ಟದಾಟ ಎನ್ನುವುದು ಈ ನಿರ್ಮಾಪಕರ ವಿಷಯದಲ್ಲಿ ಪದೇ ಪದೇ ರುಜುವಾತಾಗುತ್ತಿದೆ. ■





# ಕೂದಲು ಕಸಿಯ ಕಸಿವಿಸಿಯಿಂದ ಅನುಪಮ್ ದೂರ

ನಟ ಅನುಪಮ್ ಖೇರ್ ಚಿತ್ರರಂಗ ಪ್ರವೇಶಿಸಿದ್ದು 1981ರಲ್ಲಿ. ಆಗಲೇ ಅವರ ತಲೆ ಮೇಲೆ ಕೂದಲು ಇಲ್ಲವಾಗಿತ್ತು. ಅನೇಕರು ಬೋಳುತಲೆ ಇಟ್ಟುಕೊಂಡು ನಟನಾಗುವುದು ಸಾಧ್ಯವೇ ಎಂದು ಕಿಚಾಯಿಸಿದ್ದರು. ಆಮೇಲೆ ಅವರು ನಟರಾಗಿ ಛಾಪು ಮೂಡಿಸಿದ್ದನ್ನು ಕಂಡೆವು.

ಎರಡು ರಾಷ್ಟ್ರ ಪ್ರಶಸ್ತಿಗಳಿಗೂ ಭಾಜನರಾಗಿರುವ ಅನುಪಮ್ ಖೇರ್, ಇತ್ತೀಚೆಗೆ ಸಂದರ್ಶನವೊಂದರಲ್ಲಿ ತಮ್ಮ ಬೋಳುತಲೆಯ ಕುರಿತು ಮಾತನಾಡಿದರು.

‘ನಾನು ಕೂದಲನ್ನು ಕಸಿ ಮಾಡುವ ಹಲವು ಕಂಪನಿಗಳ ಪಾಲಿಗೆ ಇಷ್ಟವಾಗಿದ್ದೆ. ಅನೇಕರು ಬಂದು ಕೂದಲಿನ ಕಸಿ ಮಾಡಿಸಿಕೊಳ್ಳುವಂತೆ ನನಗೆ ದುಂಬಾಲು ಬಿದ್ದಿದ್ದರು. ಕಸಿ ಮಾಡಿಸಿಕೊಳ್ಳಲು ದೊಡ್ಡ ಮೊತ್ತದ ಹಣ ಕೊಡುವ ಆಮಿಷವನ್ನೂ ಒಡ್ಡಿದ್ದರು. ಆದರೆ, ಅಂತಹ ಅವಕಾಶವನ್ನು ನಾನು ಯಾರಿಗೂ ಕೊಡಲಿಲ್ಲ. ಎಷ್ಟೇ ಕಷ್ಟ ಬಂದರೂ ಕೂದಲಿನ ಕಸಿ ಮಾಡಿಸಿಕೊಳ್ಳಲು ಹಣವನ್ನಂತೂ ಪಡೆಯುವುದಿಲ್ಲ ಎಂದು ನಿರ್ಧರಿಸಿದೆ. ನನ್ನ ಮಗ ಸಿಕಂದರ್ ಖೇರ್ ಕೂಡ ಕೂದಲಿನ ಯಾವುದೇ ತೈಲ ಕೊಳ್ಳಬೇಡ ಎಂದು ಸಲಹೆ ನೀಡಿದ್ದ. ಅದಕ್ಕೆ ಇವತ್ತಿನವರೆಗೂ ಬದ್ಧನಾಗಿಯೇ ಇದ್ದೇನೆ’ ಎಂದು ಅನುಪಮ್ ಹೇಳಿದ್ದಾರೆ. ಹಣದಾಸೆಗೆ ಪ್ರಯೋಗಪಶು ಆಗುವುದು ಸರಿಯಲ್ಲ ಎಂಬ ನೀತಿಯನ್ನು ಅವರು ತಮ್ಮ ಈ ಬದುಕಿನ ಮೂಲಕವೇ ಸಾಬೀತುಪಡಿಸಿದ್ದಾರೆ. ■